2018 ಕ.ತೀ.ವ. 737

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

## ಅಸೂಂತ ಡಿ'ಸೋಜಾ -ವಿರುದ್ಧ- ಜಾಯ್ಸ್ ಪಾಸ್ಕೀನ ಡಿ'ಸೋಜಾ ನೀ ಡಿ'ವೇಲರ್ಲೊ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227 ರಡಿಯಲ್ಲಿ ರಿಟ್ ಅರ್ಜಿ.

ದಾನ ಪತ್ರವನ್ನು ರದ್ದುಗೊಳಿಸುವಂತೆ ಕೋರಿ ಸಲ್ಲಿಸಿದ ದಾವೆಯಲ್ಲಿ ನ್ಯಾಯಾಲಯ ಶುಲ್ಕವನ್ನು ಯಾವ ರೀತಿ ನೀಡಬೇಕೆಂದು ನಿರ್ಧರಿಸಬೇಕೆಂಬುದೇ ಸದರಿ ರಿಟ್ ಅರ್ಜಿಯಲ್ಲಿ ಉದ್ಭವಿಸಿರುವ ಪ್ರಶ್ನೆ.

ದಾನ ಪತ್ರದಲ್ಲಿ ಸ್ವತ್ತಿನ ಮೌಲ್ಯವನ್ನು ನಮೂದಿಸದ ಕಾರಣ 1958ರ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವೆಗಳ ಮೌಲೀಕರಣ ಅಧಿನಿಯಮ 38ನೇ ಪ್ರಕರಣದ ಅನ್ವಯ ದಾನವನ್ನು ನೀಡಿದ ಸ್ವತ್ತಿನ ಮಾರುಕಟ್ಟೆ ದರದ ಆಧಾರದ ಮೇಲೆ ನ್ಯಾಯಾಲಯದ ಶುಲ್ಕವನ್ನು ನೀಡಬೇಕೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇಖಿಸಿದೆ.

ಅರ್ಜಿದಾರರ ಪರ: ಶ್ರೀ ಜಿ. ರವಿಶಂಕರ್ ಶಾಸ್ತ್ರಿ, ವಕೀಲರು
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಎಸ್. ವಿಶ್ವಜಿತ್, ವಕೀಲರು
2ನೇ ಪ್ರತ್ಯರ್ಜಿದಾರರ ಪರ ನೋಟಿಸ್ ನೀಡಲಾಗಿದೆ.

* ರಿಟ್ ಅರ್ಜಿ ಸಂ.39031/2013 (ಜಿಎಂ-ಸಿಪಿಸಿ), ದಿನಾಂಕ: 21ನೇ ಮಾರ್ಚ್, 2017

## ಆಜ್ಞೆ

**ನ್ಯಾಯಮೂರ್ತಿ ಎಚ್.ಜಿ. ರಮೇಶ್ (ಮೌಖಿಕ):**

*1. ದಾನ ಪತ್ರವನ್ನು ರದ್ದುಪಡಿಸಿದ್ದಕ್ಕಾಗಿ ದಾವೆಯನ್ನು ದಾಖಲು ಮಾಡಿದ್ದು ರದ್ದುಪಡಿಸಿದ ಪರಿಹಾರಕ್ಕಾಗಿ ನ್ಯಾಯಾಲಯದ ಫೀಜಿನ ಸಂದಾಯವನ್ನು ಯಾವ ರೀತಿಯಲ್ಲಿ ಪರಿಗಣಿಸಬಹುದು? ಈ ಪ್ರಶ್ನೆಗೆ, ಈ ಪ್ರಕರಣದಲ್ಲಿ ಅಗತ್ಯವಾಗಿ ಉತ್ತರವನ್ನು ನೀಡಬೇಕಾಗಿದೆ.*

2. ಈ ರಿಟ್ ಅರ್ಜಿಯನ್ನು ವಾದಿಯಿಂದ ದಾಖಲುಮಾಡಲಾಗಿದೆ ಮತ್ತು ಓ.ಎಸ್.ಸಂ. 581/2013ರ ದಾವೆಯಲ್ಲಿರುವಂತೆ ಅಧಿವಿಚಾರಣಾ ನ್ಯಾಯಾಲಯ ಮಾಡಿದ ವಾದಕಾಲೀನ ಆದೇಶ ದಿನಾಂಕ 14.08.2013ರ ವಿರುದ್ಧ ನಿರ್ದೇಶಿಸಲಾಗಿದೆ. ಪ್ರಶ್ನಿತ ಆದೇಶದಿಂದ, ಅಧಿವಿಚಾರಣಾ ನ್ಯಾಯಾಲಯ, ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ಅಧಿನಿಯಮ, 1958ರ (ಸಂಕ್ಷಿಪ್ತವಾಗಿ ಈ ಅಧಿನಿಯಮ) 38ನೇ ಪ್ರಕರಣದ ಮೇಲೆ ಅವಲಂಬಿಸಿದ್ದು, ನೋಂದಾಯಿತ ದಾನಪತ್ರ ದಿನಾಂಕ 29.03.2007ರ ವಸ್ತು ವಿಷಯಕ್ಕೊಳಪಟ್ಟ ಅದು ವಾದಪತ್ರದ ಷೆಡ್ಯೂಲ್ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ನ್ಯಾಯಾಲಯ ಫೀಜನ್ನು ಸಂದಾಯಮಾಡಲು ಅರ್ಜಿದಾರನಿಗೆ ನಿರ್ದೇಶಿಸಲಾಗಿದೆ. ಆಕೆಯಿಂದ ಬರೆದುಕೊಡಲಾದ ಈ ಹಿಂದೆ ಹೇಳಿದ ದಾನಪತ್ರವನ್ನು ರದ್ದುಪಡಿಸಿದ್ದರಿಂದ ಅರ್ಜಿದಾರನಿಂದ ಈ ದಾವೆಯನ್ನು ದಾಖಲು ಮಾಡಲಾಗಿದೆ ಮತ್ತು ಅದನ್ನು ಅಕೃತ ಮತ್ತು ಶೂನ್ಯವೆಂದು ಘೋಷಿಸಲಾಗಿದೆ ಹಾಗೂ ವಾದಿ ಮತ್ತು ಇತರೇ ಕೆಲವೊಂದು ಪರಿಹಾರಗಳಿಗಾಗಿ ಬದ್ಧವಾಗಿರುವುದಿಲ್ಲ. ದಾನಪತ್ರವನ್ನು ರದ್ದುಪಡಿಸಿದ್ದಕ್ಕಾಗಿ ಪರಿಹಾರವನ್ನು, ಈ ಅಧಿನಿಯಮದ 24ನೇ(ಡಿ) ಪ್ರಕರಣದ ಅಡಿಯಲ್ಲಿ ಮೌಲ್ಯೀಕರಿಸಲಾಗಿದೆ.

3. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ನಾನು ಆಲಿಸಿದ್ದೇನೆ ಮತ್ತು ದಾಖಲೆಯನ್ನು ಪರಿಶೀಲಿಸಲಾಗಿದೆ. ಅಧಿವಿಚಾರಣಾ ನ್ಯಾಯಾಲಯ, ದಾನಪತ್ರದ ವಸ್ತುವಿಷಯಕ್ಕೊಳಪಟ್ಟಿದ್ದು ಅದು ವಾದಪತ್ರದ ಷೆಡ್ಯೂಲ್ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಈ ಅಧಿನಿಯಮದ 38ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯ ಫೀಜನ್ನು ಸಂದಾಯಮಾಡಲು ಅರ್ಜಿದಾರನಿಗೆ ನಿರ್ದೇಶಿಸಿ ಕಾನೂನಿನಲ್ಲಿರುವಂತೆ ತಪ್ಪುಮಾಡಿದೆಯೆಂದು ಅರ್ಜಿದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ವಾದವನ್ನು ಮಂಡಿಸಿದ್ದಾರೆ. ಈ ಅಧಿನಿಯಮದ 24ನೇ(ಡಿ) ಪ್ರಕರಣದ ಪ್ರಕಾರ ನ್ಯಾಯಾಲಯದ ಫೀಜನ್ನು ಸಂದಾಯ ಮಾಡಿರುವುದನ್ನು ಅಂಗೀಕರಿಸಲೇಬೇಕೆಂದು ಅವರು ವಾದವನ್ನು ಮಂಡಿಸಿದ್ದಾರೆ.

4. ಈ ಅರ್ಜಿಯಲ್ಲಿ ಎತ್ತಲಾದ ಪ್ರಶ್ನೆಯನ್ನು ಪರೀಕ್ಷಿಸಲಾಗಿದ್ದು, ಈ ಅಧಿನಿಯಮದ 38ನೇ ಪ್ರಕರಣವನ್ನು ಉಲ್ಲೇಖಿಸಿರುವುದು ಸುಸಂಬದ್ಧವಾಗಿದ್ದು, ಅದು ಈ ಮುಂದಿನಂತಿದೆ:

> ''38. **ಡಿಕ್ರಿ ಇತ್ಯಾದಿಗಳ ರದ್ದಿಯಾತಿಯ ಸಲುವಾಗಿನ ದಾವೆಗಳು.**- ಹಣದ ಅಥವಾ ಹಣದ ಮೌಲ್ಯವಿರುವ ಇತರ ಸ್ವತ್ತಿನ ಬಗ್ಗೆ ಡಿಕ್ರಿಯನ್ನು, ಅಥವಾ ಹಣದಲ್ಲಿ, ಅಥವಾ ಚರ ಇಲ್ಲವೇ ಸ್ಥಿರಸ್ವತ್ತಿನಲ್ಲಿ ಯಾವುದಾದರೂ ಅಧಿಕಾರವನ್ನು, ಹಕ್ಕನ್ನು ಅಥವಾ ಹಿತವನ್ನು ಸದ್ಯದಲ್ಲಿ ಅಥವಾ ಮುಂದೆ ಸೃಷ್ಟಿಸುವುದಾಗಿ, ಘೋಷಿಸುವುದಕ್ಕಾಗಿ, ವಹಿಸಿಕೊಡುವುದಕ್ಕಾಗಿ, ಪರಿಮಿತಗೊಳಿಸುವುದಾಗಿ ಅಥವಾ ಲಯಗೊಳಿಸುವುದಾಗಿ ಭಾವಿಸಲಾಗುವ ಅಥವಾ ಪ್ರವರ್ತಿಸುವ ಇತರ ದಸ್ತಾವೇಜನ್ನು ರದ್ದುಗೊಳಿಸುವ ಸಲುವಾಗಿನ ದಾವೆಯಲ್ಲಿ ದಾವೆಯ ವಿಷಯದ ಮೌಲ್ಯದ ಮೇಲೆ ಫೀಜನ್ನು ಪರಿಗಣಿಸತಕ್ಕದ್ದು ಮತ್ತು ಇಂಥ ಮೌಲ್ಯವು -

ಇಡೀ ಡಿಕ್ರಿಯ ಅಥವಾ ಇತರ ದಸ್ತಾವೇಜಿನ ರದ್ದಿಯಾತಿಯನ್ನು ಕೇಳಲಾಗಿದ್ದರೆ, ಡಿಕ್ರಿ ಮಾಡಲಾದ ಅಥವಾ ಇತರ ದಸ್ತಾವೇಜನ್ನು ಬರೆದುಕೊಡಲಾದ ಸ್ವತ್ತಿನ ಮೊಬಲಗು ಅಥವಾ ಮೌಲ್ಯ ಎಂದು,

ಡಿಕ್ರಿಯ ಅಥವಾ ಇತರ ದಸ್ತಾವೇಜಿನ ಭಾಗದ ರದ್ದತಿಯನ್ನು ಕೇಳಲಾಗಿದ್ದರೆ ಸ್ವತ್ತಿನ ಮೊಬಲಗಿನ ಅಥವಾ ಮೌಲ್ಯದ ಅಂಥ ಭಾಗ ಎಂದು

(2) ಡಿಕ್ರಿಯು ಅಥವಾ ಇತರ ದಸ್ತಾವೇಜು ಭಾಗಿಸಲಾಗದಂಥ ಹೊಣೆಯಿಂದ ಕೂಡಿದ್ದರೆ, ಮತ್ತು ಕೇಳಲಾದ ಪರಿಹಾರವು ವಾದಿಗೆ ಸೇರಿದ ಸ್ವತ್ತಿನ ವಿಶಿಷ್ಟ ಬಾಬು ಅಥವಾ ಅಂಥ ಯಾವುದೇ ಸ್ವತ್ತಿನಲ್ಲಿರುವ ವಾದಿಯ ಪಾಲು, ಇವುಗಳಿಗೆ ಮಾತ್ರ ಸಂಬಂಧಿಸಿದ್ದರೆ, ಅಂಥ ಸ್ವತ್ತಿನ ಅಥವಾ ಪಾಲಿನ ಮೌಲ್ಯ ಅಥವಾ ಡಿಕ್ರಿಯ ಮೊಬಲಗು, ಇವುಗಳಲ್ಲಿ ಯಾವುದೂ ಕಡಿಮೆಯೋ ಅದರ ಮೇಲೆ ಫೀಜನ್ನು ಪರಿಗಣಿಸತಕ್ಕದ್ದು.

5. ಮೇಲೆ ಉದ್ಧರಿಸಲಾದ ಈ ಅಧಿನಿಯಮದ 38ನೇ ಪ್ರಕರಣದಲ್ಲಿ ಬಳಸಲಾದ ಭಾಷೆಗೆ ಸಂಬಂಧಿಸಿದಂತೆ, ದಾವೆಯಲ್ಲಿ, ದಾನಪತ್ರವನ್ನು ರದ್ದುಪಡಿಸುವುದಕ್ಕಾಗಿ ವಾದಿಯು, ದಾನಪತ್ರವನ್ನು ಬರೆದುಕೊಡಲಾದ ಅದರ ಸ್ವತ್ತಿನ ಮೌಲ್ಯದ ಮೇಲೆ ನ್ಯಾಯಾಲಯದ ಫೀಜನ್ನು ಸಂದಾಯಮಾಡುವುದು. ದಾನಪತ್ರದಲ್ಲಿ ಹೇಳಲಾದ ಮೌಲ್ಯವು, ಆ ಸ್ವತ್ತಿನ ಮೌಲ್ಯವಾಗಿರುವುದಾಗಿ ಭಾವಿಸತಕ್ಕದ್ದು, ದಾನಮಾಡಲಾದ ಸ್ವತ್ತಿನ ಮೌಲ್ಯವನ್ನು, ದಾನಪತ್ರದಲ್ಲಿ ಹೇಳಲಾಗದಿದ್ದಲ್ಲಿ, ದಾನಪತ್ರವನ್ನು ಬರೆದುಕೊಟ್ಟ ದಿನಾಂಕದಂತೆ ಆ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ, ಆನಂತರ ನ್ಯಾಯಾಲಯದ ಫೀಜನ್ನು

ಸಂದಾಯಮಾಡಬಹುದು ಮತ್ತು ಈ ಅಧಿನಿಯಮದ ಉಪಬಂಧಗಳ ಪ್ರಕಾರ ಪರಿಗಣಿಸಬಹುದಾಗಿದೆ. ಈ ಅಧಿನಿಯಮದ 24ನೇ ಪ್ರಕರಣ, ಈ ಅಧಿನಿಯಮದ 38ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿವಿಧ ದಸ್ತಾವೇಜುಗಳ ರದ್ದಿಯಾತಿಗಾಗಿ ದಾಖಲುಮಾಡಿದ ದಾವೆಗಳಿಗೆ ಅನ್ವಯಿಸುವುದಿಲ್ಲವೆಂದು ಹೇಳಿರುವುದು ಸುಸಂಬದ್ಧವಾಗಿದೆ.

6. ಪ್ರಸ್ತುತ ಪ್ರಕರಣದಲ್ಲಿ, ಆ ಸ್ವತ್ತಿನ ಮೌಲ್ಯವನ್ನು, ದಾನಪತ್ರದಲ್ಲಿರುವಂತೆ ಹೇಳಿರುವುದಿಲ್ಲ. ಹಾಗಿರುವಾಗ, ಈ ಅಧಿನಿಯಮದ 38ನೇ ಪ್ರಕರಣದ ಪ್ರಕಾರ, ಅರ್ಜಿದಾರನು, ದಾನಪತ್ರವನ್ನು ಬರೆದುಕೊಟ್ಟ ದಿನಾಂಕದಂದು ಇದ್ದಂತೆ ದಾನಮಾಡಿದ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ನ್ಯಾಯಾಲಯದ ಫೀಜನ್ನು ಸಂದಾಯಮಾಡುವುದು. ಮಾರುಕಟ್ಟೆ ಮೌಲ್ಯವನ್ನು, ಈ ಅಧಿನಿಯಮದ ಉಪಬಂಧಗಳ ಪ್ರಕಾರ ಲೆಕ್ಕ ಹಾಕತಕ್ಕದ್ದು. ಅಗತ್ಯಪಡಿಸಿದ ನ್ಯಾಯಾಲಯದ ಫೀಜನ್ನು ಈಗಾಗಲೇ ಸಂದಾಯ ಮಾಡದಿದ್ದಲ್ಲಿ ನ್ಯಾಯಾಲಯ ಫೀಜನ್ನು ಸಂದಾಯಮಾಡಲು ಮೂರು ತಿಂಗಳ ಅವಧಿಯನ್ನು ಮಂಜೂರು ಮಾಡಲಾಗಿದೆ. ಈ ರಿಟ್ ಅರ್ಜಿಯನ್ನು, ಅದರಲ್ಲಿ ಪ್ರಶ್ನಿತ ಆದೇಶವನ್ನು ಮಾರ್ಪಡಿಸಿ ಮೇಲಿನ ನಿಬಂಧನೆಗಳಲ್ಲಿರುವಂತೆ ವಿಲೆ ಮಾಡಲಾಗಿದೆ.

ಅರ್ಜಿಯನ್ನು ವಿಲೆ ಮಾಡಲಾಗಿದೆ.

---